# ಹಿಂದೂ ರಾಷ್ಟ್ರ ಏಕೆ ಬೇಕು ?

## ಮನೋಗತ




ಜಗತ್ತಿನಲ್ಲಿ ಕ್ರೈಸ್ತರಿಗೆ ೧೫೭, ಮುಸಲ್ಮಾನರಿಗೆ ೫೨, ಬೌದ್ಧರಿಗೆ ೧೨ ಹಾಗೂ ಜ್ಯೂ ಜನರಿಗೆ ೧ ರಾಷ್ಟ್ರವಿದೆ. ಹಿಂದೂಗಳ ರಾಷ್ಟ್ರವು ಈ ಸೌರಮಂಡಲದಲ್ಲಿ ಎಲ್ಲಿದೆ ? ಹೌದು, ಹಿಂದೂಗಳ ಒಂದು ಸನಾತನ ರಾಷ್ಟ್ರವು ೧೯೪೭ ರ ವರೆಗೆ ಈ ಭೂಮಿಯ ಮೇಲಿತ್ತು. ಆದರೆ ಆ ರಾಷ್ಟ್ರದ ಇಂದಿನ ಸ್ಥಿತಿ ಹೇಗಿದೆ ?

### ಆಗಿನ ಭಾರತ ಮತ್ತು ಇಂದಿನ ಭಾರತ !

೧೯೪೭ ರಲ್ಲಿ ೧ ರೂಪಾಯಿ ಸಾಲವಿಲ್ಲದ ಭಾರತದಲ್ಲಿ ಇಂದು ಪ್ರತಿಯೊಬ್ಬ ನಾಗರಿಕನ ತಲೆಯ ಮೇಲೆ ೩೨,೮೧೨ ರೂಪಾಯಿ ಸಾಲದ ಹೊರೆಯಿದೆ. ೧೯೪೭ ರಲ್ಲಿ ಶೇ. ೩೩ ಕ್ಕಿಂತಲೂ ಹೆಚ್ಚು ರಫ್ತು ಮಾಡುತ್ತಿದ್ದ ಭಾರತ ಇಂದು ಶೇ. ೧ ಕ್ಕಿಂತಲೂ ಕಡಿಮೆ ರಫ್ತು ಮಾಡುತ್ತಿದೆ. ಆಗ ಕೇವಲ ೧೦ ರಿಂದ ೨೦ ವಿದೇಶಿ ಕಂಪನಿಗಳಿದ್ದ ಭಾರತದಲ್ಲಿ ಇಂದು ೫೦೦೦ ಕ್ಕಿಂತಲೂ ಹೆಚ್ಚು ವಿದೇಶಿ ಕಂಪನಿಗಳಿವೆ. ಒಂದೂ ಸೂಕ್ಷ್ಮ (ಸೆನ್ಸೆಟಿವ್) ಜಿಲ್ಲೆಯಿಲ್ಲದ ಭಾರತದಲ್ಲಿ ಇಂದು ೩೦೦ ಕ್ಕಿಂತಲೂ ಹೆಚ್ಚು ಜಿಲ್ಲೆಗಳು ಸೂಕ್ಷ್ಮ ಪ್ರದೇಶಗಳಾಗಿವೆ. ಪ್ರತಿಯೊಬ್ಬ ನಾಗರಿಕನಿಗೆ ಒಂದೆರಡು ಹಸುಗಳ ಪ್ರಮಾಣವಿದ್ದ ಭಾರತದಲ್ಲಿ ಇಂದು ಅನಿರ್ಬಂಧಿತ ಗೋಹತ್ಯೆಯಿಂದಾಗಿ ೧೨ ವ್ಯಕ್ತಿಗಳಿಗೆ ಒಂದು ಹಸು ಎಂಬ ಸಮೀಕರಣವಾಗಿದೆ. ವಿದೇಶದಲ್ಲಿ ಹೋಗಿ ಅತ್ಯಾಚಾರಿ ಕರ್ಜನ್ ವೈಲೀ, ಓಡ್‌ವೈರ್ ಇಂತಹವರನ್ನು ಕ್ರೈಸ್ತಸದನಕ್ಕೆ ಕಳುಹಿಸುವ ಭಾರತವು ಇಂದು ಸಂಸತ್ತಿನ ಮೇಲೆ ಆಕ್ರಮಣ ಮಾಡುವ ಅಫ್ಜಲ್‌ನಿಗೆ ಗಲ್ಲುಶಿಕ್ಷೆ ವಿಧಿಸಲು ೧೨ ವರ್ಷಗಳನ್ನು ತೆಗೆದುಕೊಂಡಿತು !

ದೇಶಾಭಿಮಾನ ಜಾಗೃತವಾಗಿದ್ದ ಭಾರತದಿಂದ ದೇಶಾಭಿಮಾನವನ್ನು ಅಡವಿಟ್ಟ ಭಾರತ, ಭ್ರಷ್ಟಾಚಾರ ಕಡಿಮೆ ಸ್ಥಾನದಲ್ಲಿದ್ದ ಭಾರತದಿಂದ ಭ್ರಷ್ಟಾಚಾರದ ಪರಮಾವಧಿ ತಲುಪಿರುವ ಭಾರತ, ಗಡಿಯಾಚೆಗೆ ದಿಗ್ವಿಜಯ ಸಾಧಿಸಿದ ಭಾರತದಿಂದ 'ಕಾಶ್ಮೀರವು ಇಂದು ಕೈತಪ್ಪಿ ಹೋಗುತ್ತದೆಯೋ, ನಾಳೆಯೋ' ಎಂದು ದಾರಿ ಕಾಯುವ ಭಾರತ... ಈ ಪಟ್ಟಿಯನ್ನು ಬರೆಯುವಾಗಲೂ ಮನಸ್ಸು ರೋಧಿಸುತ್ತಿದೆ; ಆದರೆ 'ಜನರದ್ದು ಬಿಡಿ, ಮನಸ್ಸಿನ ನಾಚಿಕೆ'ಯೂ ಇಲ್ಲದ ರಾಜಕಾರಣಿಗಳು ಮಾತ್ರ ಎಲ್ಲೆಡೆ ತಲೆಯೆತ್ತಿ ಮೆರೆಯುತ್ತಿದ್ದಾರೆ. ಮುಸಲ್ಮಾನ ಆಕ್ರಮಣಕಾರರು ಮತ್ತು ಧೂರ್ತ ಬ್ರಿಟಿಶರೂ ಭಾರತೀಯ ಜನತೆಯ ಶೋಷಣೆ ಮಾಡಿದರು; ಆದರೆ ಪ್ರಜಾಪ್ರಭುತ್ವ ನೀಡಿದ ನಮ್ಮ ರಾಜಕಾರಣಿಗಳು ಅದಕ್ಕಿಂತ ನೂರುಪಟ್ಟು ಶೋಷಣೆಯನ್ನು, ಅದೂ ಕೇವಲ ೬ ದಶಕಗಳಲ್ಲಿ ಮಾಡಿದರು. ಇದು ಕಟು ಸತ್ಯವಾಗಿದೆ.

'ಜನರು ಜನರಿಗಾಗಿ ಚುನಾಯಿಸಿಕೊಟ್ಟಿರುವ ಜನರ ಸರಕಾರ' ಎಂಬ ಈ ಪ್ರಜಾಪ್ರಭುತ್ವದ ವ್ಯಾಖ್ಯೆಯು ಭಾರತದಂತಹ ಜಗತ್ತಿನಲ್ಲಿನ ಎಲ್ಲಕ್ಕಿಂತ ದೊಡ್ಡ ರಾಷ್ಟ್ರಕ್ಕೆ ಮಾತ್ರ 'ಸ್ವಾರ್ಥಾಂಧರು ಸ್ವಾರ್ಥಕ್ಕಾಗಿ ಆರಿಸಿಕೊಟ್ಟಿರುವ ಸ್ವಾರ್ಥಿ ರಾಜಕಾರಣಿಗಳ ಸರಕಾರ' ಎಂದಾಗಿದೆ.

ಈ ಗ್ರಂಥದಲ್ಲಿ ಭಾರತದ ಎದುರಿಗಿರುವ ಅನೇಕ ಸಮಸ್ಯೆಗಳನ್ನು ಹೇಳಲಾಗಿದೆ. ಇಲ್ಲಿ ಹೇಳಲಾಗಿರುವ ಸಮಸ್ಯೆಗಳನ್ನು ಓದಿ ಕೆಲವರ ಮನಸ್ಸಿನಲ್ಲಿ, 'ಹಿಂದೂ ರಾಷ್ಟ್ರ'ದಲ್ಲಾದರೂ

ಈ ಸಮಸ್ಯೆಗಳು ಸರಿಯಾಗಬಹುದೇ ? ಹೀಗೆ ಇತಿಹಾಸದಲ್ಲಿ ಎಂದಾದರೂ ಘಟಿಸಿದೆಯೇ ? ಎಂಬ ಸಂಶಯ ನಿರ್ಮಾಣವಾಗಬಹುದು. 'ಹೌದು, ಇತಿಹಾಸದಲ್ಲಿ ಇಂತಹದೊಂದು ಘಟನೆ ಘಟಿಸಿದೆ ! ಛತ್ರಪತಿ ಶಿವಾಜಿ ಮಹಾರಾಜರ 'ಹಿಂದೂ ರಾಷ್ಟ್ರ (ಹಿಂದವೀ ಸ್ವರಾಜ್ಯ)' ಸ್ಥಾಪನೆಯಾದ ಕೂಡಲೆ ಆಗಿನ ಇಂತಹ ಎಲ್ಲ ಸಮಸ್ಯೆಗಳು ದೂರವಾಗಿದ್ದವು !' ಎಂಬುದನ್ನು ಇಂತಹವರು ಅರಿತುಕೊಳ್ಳಬೇಕು.

## ಛತ್ರಪತಿ ಶಿವಾಜಿ ಮಹಾರಾಜರ 'ಹಿಂದೂ ರಾಷ್ಟ್ರ' ಸ್ಥಾಪನೆಯಾದ ಕೂಡಲೆ ಎಲ್ಲವೂ ಸರಿಯಾಯಿತು !

ಇಂದಿನಂತೆಯೇ ಛತ್ರಪತಿ ಶಿವಾಜಿ ಮಹಾರಾಜರು ಜನಿಸುವ ಮೊದಲು ಹಿಂದೂ ಸ್ತ್ರೀಯರ ಶೀಲವು ಸುರಕ್ಷಿತವಿರಲಿಲ್ಲ, ಪ್ರತ್ಯಕ್ಷ ಜೀಜಾಮಾತೆಯ ಮೈದುನನ ಹೆಂಡತಿಯನ್ನೇ ಯವನ ಸರದಾರನು ಸ್ನಾನಘಟ್ಟದಿಂದ ಅಪಹರಿಸಿಕೊಂಡು ಹೋಗಿದ್ದನು. ಆ ಕಾಲದಲ್ಲಿಯೂ ದೇವಸ್ಥಾನಗಳನ್ನು ಧ್ವಂಸಗೊಳಿಸಲಾಗುತ್ತಿತ್ತು ಮತ್ತು ಗೋಮಾತೆಯ ಕುತ್ತಿಗೆಯ ಮೇಲೆ ಕಸಾಯಿಯ ಚೂರಿ ಯಾವಾಗ ಬೀಳುವುದು ಎಂಬುದನ್ನು ಹೇಳಲು ಸಾಧ್ಯವಿರಲಿಲ್ಲ. ಮಹಾರಾಜರ 'ಹಿಂದೂ ರಾಷ್ಟ್ರ'ವು ಸ್ಥಾಪನೆಯಾದ ಕೂಡಲೆ ದೇವಸ್ಥಾನಗಳನ್ನು ಧ್ವಂಸಗೊಳಿಸುವುದು ನಿಂತಿತು, ಮಾತ್ರವಲ್ಲ ದೇವಸ್ಥಾನಗಳನ್ನು ಧ್ವಂಸಗೊಳಿಸಿ ಕಟ್ಟಲಾಗಿದ್ದ ಮಸೀದಿಗಳು ಪುನಃ ಹಿಂದಿನಂತೆ ದೇವಸ್ಥಾನಗಳಲ್ಲಿ ರೂಪಾಂತರಗೊಂಡವು. ಕಣ್ಣುಗಳಿಂದ ಕಣ್ಣೀರು ಸುರಿಸುವ ಗೋಮಾತೆಯು ಆನಂದದಿಂದ ಅಂಬಾ ಎನ್ನತೊಡಗಿದಳು. 'ಗೋಹತ್ಯೆಯನ್ನು ನಿಲ್ಲಿಸಿ !' ಎಂಬ ಬೇಡಿಕೆಯ ಲಕ್ಷಗಟ್ಟಲೆ ಸಹಿಗಳು ಸರಕಾರಕ್ಕೆ ಹೋಗಲಿಲ್ಲ ಅಥವಾ ಮಹಾರಾಜರೂ ಯಾವುದೇ 'ಗೋಹತ್ಯಾ ಪ್ರತಿಬಂಧಕ ಕಾನೂನು'ನ್ನು ಮಂತ್ರಿಮಂಡಲದಲ್ಲಿ ಮಂಡಿಸಲಿಲ್ಲ. ಕೇವಲ 'ಹಿಂದೂ ರಾಷ್ಟ್ರ'ದ ಸ್ಥಾಪನೆಯು ಹಿಂದೂದ್ವೇಷಿಗಳ ಎದೆಯಲ್ಲಿ ನಡುಕ ಹುಟ್ಟಿಸಲು ಸಾಕಾಗುವಷ್ಟಾಯಿತು !

ಇಂದು ನಮಗೆ ಬೆಲೆಯೇರಿಕೆ ಕಾಣಿಸುತ್ತದೆ. 'ಮಹಾರಾಜರ ಆಳ್ವಿಕೆಯಲ್ಲಿ ಬೆಲೆಯೇರಿಕೆಯಿಂದ ಪ್ರಜೆಗಳಿಗೆ ತುಂಬಾ ತೊಂದರೆಯಾಗಿತ್ತು' ಎಂದು ಎಲ್ಲಿಯಾದರೂ ಓದಿದ್ದೇರೇನು ? 'ಜೈ ಜವಾನ್, ಜೈ ಕಿಸಾನ್' ಎಂದು ಘೋಷಣೆ ಮಾಡುವ ರಾಜಕಾರಣಿಗಳು ಇಂದು ಜವಾನ್ ಮತ್ತು ಕಿಸಾನ್ ಇಬ್ಬರಿಗೂ ನಾಯಿಗಳಂತೆ ಸಾಯಲು ಬಿಡುತ್ತಿದ್ದಾರೆ. ಮಹಾರಾಜರಿಗೆ ರೈತರ ಪ್ರಾಣ ಮಾತ್ರವಲ್ಲ, ಅವರು ಕಷ್ಟದಿಂದ ಬೆಳೆಸಿದ ತರಕಾರಿಗಳೂ ಅಮೂಲ್ಯವೆನಿಸುತ್ತಿದ್ದವು. 'ರೈತರ ತರಕಾರಿಗಳ ತೊಟ್ಟನ್ನೂ ಯಾರೂ ಮುಟ್ಟಬಾರದು' ಎಂದು ಅವರು ಆಜ್ಞೆಯನ್ನೇ ಹೊರಡಿಸಿದ್ದರು. ಮಹಾರಾಜರು 'ಕಿಸಾನ್'ರ ಜೊತೆಗೇ 'ಜವಾನ'ರ ಕಾಳಜಿಯನ್ನೂ ವಹಿಸುತ್ತಿದ್ದರು. ಹೋರಾಟದಲ್ಲಿ ಗಾಯಾಳುಗಳಾದ ಅನೇಕ ಸೈನಿಕರಿಗೆ ಪುರಸ್ಕಾರಗಳೊಂದಿಗೆ ಚಿನ್ನದ ಅಲಂಕಾರಗಳನ್ನೂ ಕೊಟ್ಟು ಅವರನ್ನು ಸನ್ಮಾನಿಸುತ್ತಿದ್ದರು. ಕಾರ್ಗಿಲ್ ಯುದ್ಧದಲ್ಲಿ ಪ್ರಾಣವನ್ನು ಕಳೆದುಕೊಂಡಿರುವ ಅನೇಕ ಸೈನಿಕರ ವಿಧವೆಯರಿಗಾಗಿ ೨೦೧೦ ರಲ್ಲಿ ಮಹಾರಾಷ್ಟ್ರದ ಮುಬೈಯಲ್ಲಿ 'ಆದರ್ಶ' ಸೊಸೈಟಿಯನ್ನು ನಿರ್ಮಿಸಲಾಯಿತು; ಆದರೆ ಅದರಲ್ಲಿ ಒಬ್ಬ ಸೈನಿಕನ ವಿಧವೆಗೂ ಮನೆ (ಫ್ಲ್ಯಾಟ್) ಸಿಗಲಿಲ್ಲ. ಭ್ರಷ್ಟಾಸುರರೇ ಆ ಎಲ್ಲ

ಮನೆಗಳನ್ನು ಲಪಟಾಯಿಸಿದರು ! ತದ್ವಿರುದ್ಧವಾಗಿ ಮಹಾರಾಜರು ಸಿಂಹಗಡದ ಹೋರಾಟದಲ್ಲಿ ಸಹಾಯ ಮಾಡಿದ ತಾನಾಜಿಯ ಮಗನ ಮದುವೆಯನ್ನು ಮಾಡಿಕೊಟ್ಟು ಕುಟುಂಬದವರ ಕಾಳಜಿ ವಹಿಸಿದರು !

## ಭಾರತದ ಬಾಹ್ಯ ಸಮಸ್ಯೆಗಳೂ 'ಹಿಂದೂ ರಾಷ್ಟ್ರ'ದಲ್ಲಿ ಸರಿಯಾಗುವವು !

'ಹಿಂದೂ ರಾಷ್ಟ್ರ'ದಲ್ಲಿ ಆಂತರಿಕ ಸಮಸ್ಯೆಗಳು ಸರಿಯಾಗುವವು ಹಾಗೆಯೇ ಬಾಹ್ಯ ಸಮಸ್ಯೆಗಳೂ ಸರಿಯಾಗುವವು. ಬಾಹ್ಯ ಸಮಸ್ಯೆಗಳಲ್ಲಿ ಪಾಕಿಸ್ತಾನ ಮತ್ತು ಚೀನಾ ಇವುಗಳಿಂದ ಭಾರತದ ಮೇಲೆ ಆಗಬಹುದಾದ ಆಕ್ರಮಣಗಳು ಮುಖ್ಯ ಸಮಸ್ಯೆಗಳಾಗಿವೆ. ಛ. ಶಿವಾಜಿಯವರ ಕಾಲದಲ್ಲಿಯೂ ಇಂತಹ ಸ್ಥಿತಿಯೇ ಇತ್ತು. ಔರಂಗಜೇಬನು ಮಹಾರಾಜರ ಚಿಕ್ಕ ರಾಜ್ಯವನ್ನು ಕಬಳಿಸಲು ನೋಡುತ್ತಿದ್ದನು. ಆದರೆ 'ಮಹಾರಾಜರ ರಾಜ್ಯಾಭಿಷೇಕವಾಗಿ ವಿಧಿವತ್ತಾಗಿ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಯಿತು' ಎಂಬುದನ್ನು ಕೇಳಿ ಅವನು ಹೆದರಿದನು ! ಅನಂತರ ಮುಂದೆ ಮಹಾರಾಜರು ಸ್ವರ್ಗವಾಸಿಯಾಗುವ ವರೆಗೆ ಅವನು ಕೇವಲ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ದಕ್ಷಿಣಕ್ಕೂ ಬರಲಿಲ್ಲ ! ಒಮ್ಮೆ 'ಹಿಂದೂ ರಾಷ್ಟ್ರ' ಸ್ಥಾಪನೆ ಆಯಿತೆಂದರೆ ನಮ್ಮೆಲ್ಲ ಅಕ್ಕಪಕ್ಕದವರು ತಾವಾಗಿಯೇ ಸರಿಯಾಗುವರು !

ಸಂಕ್ಷಿಪ್ತವಾಗಿ, ಇಂದು ಭಾರತದಲ್ಲಿ ಹರಡಿಕೊಂಡ ವಿವಿಧ ಸಮಸ್ಯೆರೂಪಿ ಕತ್ತಲೆ ಮತ್ತು ದುರ್ಗಂಧವೂ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಗುತ್ತಲೇ ನಾಶವಾಗುವುವು. ಧರ್ಮಾಚರಣೆ ರಾಜಕಾರಣಗಳಿಂದ ಭಾರತದ ಎದುರಿಗಿರುವ ಎಲ್ಲ ಸಮಸ್ಯೆಗಳು ಬಗೆಹರಿಯುವುವು ಮತ್ತು ಸದಾಚಾರದಿಂದ ಎಲ್ಲ ಜನತೆಯೂ ಸುಖಿಯಾಗುವುದು !

## ಒಂದೆರಡು ಸಮಸ್ಯೆಗಳ ವಿರುದ್ಧ ಹೋರಾಡುವುದಕ್ಕಿಂತ 'ಹಿಂದೂ ರಾಷ್ಟ್ರ'ದ ಸ್ಥಾಪನೆಯನ್ನು ಮಾಡುವುದು ಆವಶ್ಯಕ

ಕೇವಲ ಭಾರತದ ಜನರಿಗೆ ಮಾತ್ರವಲ್ಲ, ಅಖಿಲ ಮಾನವಜಾತಿಯ ಕಲ್ಯಾಣಕ್ಕಾಗಿ ಸ್ಥಾಪಿಸಬೇಕಾದ 'ಹಿಂದೂ ರಾಷ್ಟ್ರ' ಮಾತ್ರ ತಾನಾಗಿಯೇ ಸ್ಥಾಪನೆಯಾಗಲಾರದು. ಪಾಂಡವರಿಗೆ ಕೇವಲ ಐದು ಹಳ್ಳಿಗಳು ಬೇಕಾಗಿದ್ದವು, ಅವೂ ಅವರಿಗೆ ಸಹಜವಾಗಿ ಸಿಗಲಿಲ್ಲ. ನಮಗೆ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಅಖಂಡ 'ಹಿಂದೂ ರಾಷ್ಟ್ರ' ಬೇಕಾಗಿದೆ. ಇದಕ್ಕಾಗಿ ಮಾತ್ರ ಬಹಳ ದೊಡ್ಡ ಹೋರಾಟವನ್ನೇ ಮಾಡಬೇಕಾಗುವುದು. ಭಾರತದ ಎದುರಿಗಿರುವ ಒಂದೆರಡು ಸಮಸ್ಯೆಗಳ (ಉದಾ. ಗೋಹತ್ಯೆ, ಮತಾಂತರ, ಗಂಗೆಯ ಮಾಲಿನ್ಯ, ಕಾಶ್ಮೀರ, ರಾಮಮಂದಿರ, ಸ್ವಭಾಷೆಗಳ ರಕ್ಷಣೆ ಮುಂತಾದವುಗಳ) ವಿರುದ್ಧ ಒಬ್ಬಿಬ್ಬರು ಹೋರಾಡುವುದಕ್ಕಿಂತ ಎಲ್ಲ ಸಮವಿಚಾರಿ ವ್ಯಕ್ತಿ ಮತ್ತು ಸಂಸ್ಥೆಗಳು ಕೂಡಿಕೊಂಡು 'ಹಿಂದೂ ರಾಷ್ಟ್ರ ಸ್ಥಾಪನೆ'ಯ ಧ್ಯೇಯವನ್ನೇ ಇಟ್ಟುಕೊಂಡು ಕೃತಿ ಮಾಡಿದರೆ ಈ ಹೋರಾಟವು ಸ್ವಲ್ಪ ಸುಗಮವಾಗುವುದು.

ಸ್ವಾಮಿ ವಿವೇಕಾನಂದರು, ಯೋಗಿ ಅರವಿಂದರು, ಸ್ವಾತಂತ್ರ್ಯವೀರ ಸಾವರಕರರು ಮತ್ತು ಪ.ಪೂ. ಗೋಳವಲಕರ ಗುರೂಜಿಗಳಂತಹ ಹಿಂದೂ ಧರ್ಮದ ಮಹಾನ್

卐 ——————————————————————————— 卐

ಪುರುಷರು ಆಶಿಸಿದ ಧರ್ಮಾಧಿಷ್ಠಿತ ‘ಹಿಂದೂ ರಾಷ್ಟ್ರ’ ಸ್ಥಾಪನೆಯಾಗಲು ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಾಮರ್ಥ್ಯವು ಹಿಂದುತ್ವನಿಷ್ಠರಿಗೆ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

卐 ——————————————————————————— 卐

## ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಆಧ್ಯಾತ್ಮಿಕ ಸಾಮರ್ಥ್ಯ ಹೆಚ್ಚಿಸಿ !

ದೈವೀ ಸಾಮರ್ಥ್ಯದ ಬಲದಲ್ಲಿಯೇ ರಾಷ್ಟ್ರರಕ್ಷಣೆ ಮತ್ತು ಧರ್ಮಸಂಸ್ಥಾಪನೆ ಆಗಿದೆ, ಎಂದು ಇತಿಹಾಸವು ಹೇಳುತ್ತದೆ. ಪಾಂಡವರಿಗೆ ಭಗವಾನ್ ಶ್ರೀಕೃಷ್ಣನು, ಛ. ಶಿವಾಜಿ ಮಹಾರಾಜರಿಗೆ ದೇವಿ ಭವಾನಿಯು ಆಧ್ಯಾತ್ಮಿಕ ಸಾಮರ್ಥ್ಯವನ್ನು ಪ್ರದಾನಿಸಿದಳು. ಧರ್ಮಾಚರಣೆಯಿಂದಲೇ ಆಧ್ಯಾತ್ಮಿಕ ಸಾಮರ್ಥ್ಯವು ಪ್ರಾಪ್ತವಾಗುತ್ತದೆ. ಹಿಂದೂಗಳೇ, ನೀವೂ ‘ಹಿಂದೂ ರಾಷ್ಟ್ರ ಸ್ಥಾಪನೆ’ಗಾಗಿ ಧರ್ಮಾಚರಣೆಯ ಮೂಲಕ ಆಧ್ಯಾತ್ಮಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಿರಿ ! - ಡಾ. ಜಯಂತ ಆಠವಲೆ (೨೦೧೩)

### ‘ಧರ್ಮಶಾಸ್ತ್ರವು ಹೀಗೇಕೆ ಹೇಳುತ್ತದೆ’ ಗ್ರಂಥಮಾಲಿಕೆಯ ಗ್ರಂಥಗಳು

## ಪೂಜಾಸಾಮಗ್ರಿಗಳ ಮಹತ್ವ



- 卐 ತೆಂಗಿನಕಾಯಿಗೆ ಶ್ರೀಫಲ ಎಂದು ಏಕೆ ಹೇಳುತ್ತಾರೆ ?
- 卐 ಬಾಳೆಎಲೆಯ ಮೇಲೆ ನೈವೇದ್ಯ ಏಕೆ ತೋರಿಸಬೇಕು ?
- 卐 ಹೂವಿನ ಮೊಗ್ಗುಗಳನ್ನು ಸೂರ್ಯಾಸ್ತದ ನಂತರ ಏಕೆ ಕೀಳಬಾರದು ?
- 卐 ದೇವರ ಪೂಜೆಯಲ್ಲಿನ ಅಕ್ಷತೆಯ ಅಕ್ಕಿಯು ಏಕೆ ಅಖಂಡವಾಗಿರಬೇಕು ?
- 卐 ತಟ್ಟೆಯಲ್ಲಿ ಪೂಜಾಸಾಮಗ್ರಿಗಳ ಜೋಡಣೆಯನ್ನು ಯಾವ ರೀತಿಯಲ್ಲಿ ಮಾಡಬೇಕು ?

---

## ಕೌಟುಂಬಿಕ ಮತ್ತು ಸಾಮಾಜಿಕ ಧಾರ್ಮಿಕ ಕೃತಿಗಳ ಹಿಂದಿನ ಶಾಸ್ತ್ರ

- 卐 ಹುಟ್ಟುಹಬ್ಬವನ್ನು ತಿಥಿಗನುಸಾರವಾಗಿ ಏಕೆ ಆಚರಿಸಬೇಕು?
- 卐 ಉಡುಗೊರೆಯ ಅರ್ಥ ಮತ್ತು ಉಡುಗೊರೆ ಹೇಗಿರಬೇಕು ?
- 卐 ಪಾಶ್ಚಾತ್ಯ ಸಂಸ್ಕೃತಿಯಂತೆ ರಿಬ್ಬನ್‌ನ್ನು ಕತ್ತರಿಸಿ ಏಕೆ ಉದ್ಘಾಟಿಸಬಾರದು ?
- 卐 ವ್ಯಾಸಪೀಠದ ಮೇಲಿನ ದೀಪಪ್ರಜ್ವಲನವನ್ನು ಸಂತರ ಅಥವಾ ಸಾತ್ತ್ವಿಕ ವ್ಯಕ್ತಿಗಳಿಂದ ಮಾಡಿಸುವುದು ಏಕೆ ಯೋಗ್ಯವಾಗಿದೆ ?

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು ‘*’ ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಪ್ರಸ್ತಾವನಾತ್ಮಕ ವಿವೇಚನೆ** ೧೮

* ಹಿಂದೂ ಧರ್ಮವು ಭಾರತೀಯರ ರಾಷ್ಟ್ರೀಯತ್ವ ಮತ್ತು ಭಾರತಭೂಮಿಯೇ ‘ಹಿಂದೂ ರಾಷ್ಟ್ರ’ ! ೧೯

**೨. ರಾಷ್ಟ್ರೀಯ ಸಮಸ್ಯೆಗಳ ದೃಷ್ಟಿಕೋನದಿಂದ ‘ಹಿಂದೂ ರಾಷ್ಟ್ರ’ ಏಕೆ ಬೇಕು ?** ೨೧

೨ ಅ. ಸಾಮಾಜಿಕ ಐಕ್ಯತೆಗಾಗಿ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೧

೨ ಆ. ನಾಗರಿಕರ ಉತ್ತಮ ಆರೋಗ್ಯಕ್ಕಾಗಿ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೩

೨ ಇ. ಯೋಗ್ಯ ಶಿಕ್ಷಣ ಸಿಗಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೪

೨ ಈ. ಕ್ರೀಡಾಕ್ಷೇತ್ರವನ್ನು ವಿಕಸಿತಗೊಳಿಸಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೫

೨ ಉ. ಸ್ವಭಾಷೆಗಳ ರಕ್ಷಣೆಯ ದೃಷ್ಟಿಯಿಂದ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೬

೨ ಊ. ರೈತರ ಹಿತ ಮತ್ತು ಆಹಾರಧಾನ್ಯಗಳ ಸಮೃದ್ಧಿಗಾಗಿ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೭

೨ ಎ. ದೇಶದ ಆರ್ಥಿಕ ದುಃಸ್ಥಿತಿ ಸುಧಾರಿಸಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೨೮

೨ ಏ. ಭ್ರಷ್ಟಾಚಾರದ ನಿರ್ಮೂಲನೆಗಾಗಿ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೩೨

೨ ಐ. ಅಪರಾಧಿಗಳಿಂದ ರಕ್ಷಣೆಯಾಗಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೩೫

೨ ಒ. ಭಾರತವನ್ನು ಅಂತರ್ಬಾಹ್ಯ ಸುರಕ್ಷಿತವಾಗಿಡಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೩೭

* ನಕ್ಸಲ್‌ವಾದ * ಪ್ರತ್ಯೇಕತಾವಾದ * ಭಯೋತ್ಪಾದನೆ ೩೭

**೩. ಧಾರ್ಮಿಕ ಸಮಸ್ಯೆಗಳ ದೃಷ್ಟಿಕೋನದಿಂದ ‘ಹಿಂದೂ ರಾಷ್ಟ್ರ ಏಕೆ ಬೇಕು ?** ೪೪

೩ ಅ. ಅಹಿಂದೂಗಳ ಧಾರ್ಮಿಕ ಆಕ್ರಮಣಗಳಿಂದ ರಕ್ಷಣೆ ಪಡೆಯಲು ‘ಹಿಂದೂ ರಾಷ್ಟ್ರ’ದ ಅವಶ್ಯಕತೆ ! ೪೪

* ಮತಾಂತರ * ‘ಲವ್ ಜಿಹಾದ್’ ! * ದಂಗೆಗಳು ೪೪

೩ ಆ. ಹಿಂದೂಗಳ ಮೇಲಿನ ವೈಚಾರಿಕ ಆಕ್ರಮಣಗಳನ್ನು ತಡೆಗಟ್ಟಲು ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೪೭

೩ ಇ. ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣದ ಪ್ರತೀಕಾರಕ್ಕಾಗಿ ‘ಹಿಂದೂ ರಾಷ್ಟ್ರ’ದ ಆವಶ್ಯಕತೆ ! ೫೦

೩ ಈ. ಹಿಂದೂಗಳ ಧರ್ಮಶ್ರದ್ಧೆಗಳ ನಾಶವನ್ನು ತಡೆಗಟ್ಟಲು ‘ಹಿಂದೂ ರಾಷ್ಟ್ರ’ದ ಅವಶ್ಯಕತೆ ! ೫೧

೩ ಈ ೧. ಪ್ರಚಂಡ ಪ್ರಮಾಣದಲ್ಲಿ ನಡೆಯುತ್ತಿರುವ ಗೋಹತ್ಯೆ ೫೧

೩ ಈ ೨. 'ದೇವನದಿ' ಗಂಗೆ 'ಮೃತನದಿ'ಯ ಕಡೆಗೆ ಪ್ರಯಾಣ ! ೫೧
೩ ಈ ೩. ಹಿಂದೂ ಧರ್ಮ, ಧರ್ಮಗ್ರಂಥಗಳು ಮತ್ತು ದೇವತೆಗಳ ನಿಂದನೆ ಮತ್ತು ವಿಡಂಬನೆ ೫೨
೩ ಈ ೪. ಸಂತರ ಅಪಕೀರ್ತಿಯನ್ನು ಮಾಡುವ ಷಡ್ಯಂತ್ರ ! ೫೩
೩ ಉ. ದೇವಸ್ಥಾನಗಳ ಸೊತ್ತುಗಳನ್ನು ರಕ್ಷಿಸಲು'ಹಿಂದೂ ರಾಷ್ಟ್ರ'ದ ಆವಶ್ಯಕತೆ ! ೫೪
೩ ಊ. ಹಿಂದೂಗಳಿಗೆ ನ್ಯಾಯಯುತ ನಡವಳಿಕೆ ಸಿಗಲು 'ಹಿಂದೂ ರಾಷ್ಟ್ರ'ದ ಆವಶ್ಯಕತೆ ! ೫೭
೩ ಊ ೧. ಅಲ್ಪಸಂಖ್ಯಾತರ ಓಲೈಕೆ ! ೫೭
೩ ಊ ೨. ಹಿಂದೂಹಿತದ ಕಾನೂನುಗಳನ್ನು ಮಾಡದೇ, ಹಿಂದೂವಿರೋಧಿ ಕಾನೂನುಗಳನ್ನು ಮಾಡುವುದು ೫೯
೩ ಊ ೩. ಕಾಶ್ಮೀರಿ ಹಿಂದೂಗಳ ಪುನರ್ವಸತಿ ಮಾಡದಿರುವುದು ವಿಪರ್ಯಾಸ ! ೬೦
೩ ಊ ೪. 'ಕೇಸರಿ ಭಯೋತ್ಪಾದನೆ'ಯ ಹುಯಿಲು ! ೬೧
೩ ಎ. ಜಗತ್ತಿನಲ್ಲಿನ ಎಲ್ಲ ಹಿಂದೂಗಳ ರಕ್ಷಣೆಗಾಗಿ 'ಹಿಂದೂ ರಾಷ್ಟ್ರ'ದ ಆವಶ್ಯಕತೆ ! ೬೨
**೪. ಸದ್ಯದ ರಾಜ್ಯಪದ್ಧತಿಗಿಂತ 'ಹಿಂದೂ ರಾಷ್ಟ್ರ'ವೇ ಏಕೆ ಶ್ರೇಷ್ಠವಾಗಿದೆ ? ೬೪**
೪ ಅ. ಭಾರತೀಯ ಪ್ರಜಾಪ್ರಭುತ್ವದ ನಿರರ್ಥಕತೆ ! ೬೪
೪ ಅ ೨. ರಾಜಕೀಯ ಪಕ್ಷಗಳ ಅವನತಿ ! ೬೬
೪ ಅ ೩. ದೋಷಯುಕ್ತ ಚುನಾವಣೆ ಪದ್ಧತಿ ! ೬೯
೪ ಅ ೪. ಸಂಸತ್ತಿನ ಸಭಾಗೃಹದಲ್ಲಿನ ಜನಪ್ರತಿನಿಧಿಗಳ ಅವನತಿ ! ೭೨
೪ ಅ ೫. ದೋಷಭರಿತ ಆಡಳಿತ ವ್ಯವಸ್ಥೆ ! ೭೫
೪ ಅ ೬. ನ್ಯಾಯವ್ಯವಸ್ಥೆಯ ದುಃಸ್ಥಿತಿ ೭೭
೪ ಅ ೭. ತತ್ತ್ವಶೂನ್ಯ ಪ್ರಸಾರಮಾಧ್ಯಮಗಳು ೭೯
೪ ಅ ೮. ರಾಜಕಾರಣಿಗಳು ತಮ್ಮ ಗೂಟಕ್ಕೆ ಕಟ್ಟಿರುವ 'ಸಂವಿಧಾನ' ! ೮೦
೪ ಆ. ಜಗತ್ತಿನ ಪ್ರಚಲಿತ ರಾಜ್ಯಪದ್ಧತಿಯಲ್ಲಿನ ಟೊಳ್ಳುತನ ! ೮೪
**೫. ಧರ್ಮಾಧಿಷ್ಠಿತ 'ಹಿಂದೂ ರಾಷ್ಟ್ರ' ಎಂದರೇನು ? ೮೯**
೫ ಅ. ಹಿಂದೂಗಳ ಹಿತವನ್ನು ಜೋಪಾನ ಮಾಡುವ ರಾಷ್ಟ್ರ ! ೮೯
೫ ಆ. ರಾಷ್ಟ್ರನಿಷ್ಠ ಮತ್ತು ಧರ್ಮಾಧಿಷ್ಠಿತ ಜೀವನವನ್ನು ಜೀವಿಸಲು ಇರುವ ಒಂದು ಪ್ರಗಲ್ಭ ಸಂಸ್ಕೃತಿ ಮತ್ತು ವ್ಯವಸ್ಥೆ ! ೮೯
೫ ಇ. ಈಶ್ವರಸಂಕಲ್ಪಿತ ಸಾಮಾಜಿಕ ವ್ಯವಸ್ಥೆ ಅಂದರೆ 'ಈಶ್ವರೀ ರಾಜ್ಯ' ! ೮೯
೫ ಈ. ಜನಹಿತಕಾರೀ ಪಿತೃಶಾಹಿ ಇರುವ 'ಆದರ್ಶ ರಾಜ್ಯ' ! ೮೯

೬. ಧರ್ಮಾಧಿಷ್ಠಿತ ‘ಹಿಂದೂ ರಾಷ್ಟ್ರ’ದ ಸ್ಥಾಪನೆಗಾಗಿ ಯೋಗದಾನ ನೀಡುವುದರ ಆವಶ್ಯಕತೆ ! ೬೦
೭. ಅಖಿಲ ಮಾನವಜಾತಿಯ ಹಿತಕ್ಕಾಗಿ ಹಿಂದೂ ಧರ್ಮಾಧಿಷ್ಠಿತ ರಾಜ್ಯಪ್ರಣಾಲಿಯೇ ಬೇಕು ! ೬೩
೮. ಆದರ್ಶ ‘ಹಿಂದೂ ರಾಷ್ಟ್ರ’ವು ಹೀಗಿರುವುದು ! ೬೪
卐 ಪರಿಶಿಷ್ಟ ೧ - ‘ಹಿಂದೂ ರಾಷ್ಟ್ರ’ ಅಥವಾ ‘ಹಿಂದೂ ರಾಷ್ಟ್ರ’ವನ್ನು ಆಗ್ರಹಿಸುವುದು ಸಾಂವಿಧಾನಿಕವೋ ಅಥವಾ ಅಸಾಂವಿಧಾನಿಕವೋ ? ೬೭

**ಭಾವೀ ಪೀಳಿಗೆಯನ್ನು ಆದರ್ಶವಾಗಿಸಲು ಮಾರ್ಗದರ್ಶಕವಾಗಿರುವ**

**ಸನಾತನದ ‘ಬಾಲಸಂಸ್ಕಾರ’ ಮಾಲಿಕೆಯ ಗ್ರಂಥಗಳು !**

**ಸುಸಂಸ್ಕಾರ ಮತ್ತು ಒಳ್ಳೆಯ ಅಭ್ಯಾಸಗಳು**

- 卐 ಮಕ್ಕಳ ಮೇಲೆ ಸುಸಂಸ್ಕಾರಗಳು ಏಕೆ ಆವಶ್ಯಕ ?
- 卐 ಮಕ್ಕಳ ಆದರ್ಶಗಳು ಹೇಗಿರಬೇಕು ಮತ್ತು ಹೇಗಿರಬಾರದು ?
- 卐 ಸ್ನೇಹಿತರನ್ನು ಆರಿಸುವಾಗ ಯಾವ ಕಾಳಜಿಯನ್ನು ತೆಗೆದುಕೊಳ್ಳಬೇಕು ?
- 卐 ಮನಸ್ಸಿನಲ್ಲಿನ ಪರೀಕ್ಷೆಯ ಭಯ / ಚಿಂತೆಯನ್ನು ಹೇಗೆ ಹೋಗಲಾಡಿಸಬೇಕು ?

---

**ರಾಷ್ಟ್ರ ಮತ್ತು ಧರ್ಮ ಪ್ರೇಮಿಗಳಾಗಿರಿ !**

- 卐 ಸ್ವಭಾಷಾಭಿಮಾನ ಹೆಚ್ಚಾಗಲು ಏನು ಮಾಡಬೇಕು ?
- 卐 ಸ್ವದೇಶಿ ವಸ್ತುಗಳನ್ನೇ ಏಕೆ ಉಪಯೋಗಿಸಬೇಕು ?
- 卐 ರಾಷ್ಟ್ರಗೀತೆ / ರಾಷ್ಟ್ರಧ್ವಜದ ಗೌರವವನ್ನು ಹೇಗೆ ಕಾಪಾಡಬೇಕು ?
- 卐 ಧರ್ಮಪ್ರೇಮ ಮತ್ತು ಧರ್ಮನಿಷ್ಠೆ ಹೇಗೆ ಹೆಚ್ಚಿಸಬೇಕು ?

**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ -
E-mail : chaitanya.grantha@gmail.com ಮೊಬೈಲ್ : ೬೩೪೨೫೪೬೨೬

ಸನಾತನದ ಗ್ರಂಥ ಮತ್ತು ಉತ್ಪನ್ನಗಳನ್ನು ಖರೀದಿಸಲು - **SanatanShop.com**